Mr. SPEAKER.—This supplementry is beyond the scope of the main question and hence it is disallowed.

Sri B. B. SAYANAK.—May I know whether Government have instructed the authorities concerned not to take up water supply works to the seven villages because according to the Mahajan Commission Report these villages will be merged with Maharashtra ?

Sri P. M. NADGOUDA.—Government is not so narrow minded as the hon'ble member thinks.

Construction of Road

184. Sri S. BANGARAPPA (Sorab).—

Will the Minister for Public Works be pleased to state :—

(*a*) whether Government proposes to construct motorable road from Chikkerur (Dharwar District) to Banavasi (North Kanara District) *via* Yennekoppa, Nagavadi, Nittakki of Sorab Taluk ;

(*b*) if so, when the work will be started ?

A.—Sri K. LAKKAPPA (Minister for Public Works).—

(*a*) There is no such proposal for the present.

(*b*) Does not arise in view of the reply to clause (*a*) of the question.

ಶ್ರೀ ಎಸ್. ಬಂಗಾರಪ್ಪ.—ಈಗ ಧಾರವಾಡದ ಚಿಕ್ಕರೂರಿನಿಂದ ಸೊರಬ, ಎಣ್ಣೆಕೊಪ್ಪ, ನಾಗವಾಡಿ, ನಿಟ್ಟಕ್ಕಿಯಾಗಿ ಬನವಾಸಿಗೆ ಹೋಗುವ ತಾಲ್ಲೂಕು ಬೋರ್ಡ್ ರೋಡು ಇದೆ. ಅದನ್ನು ಪಿ.ಡಬ್ಲ್ಯು.ಡಿ. ತೆಗೆದುಕೊಂಡು ಜಾಸ್ತಿ ಮಾಡಿ ಮೋಟಾರಬಲ್ ರೋಡು ಮಾಡುವುದಕ್ಕೆ ಪರಿಶೀಲನೆ ಮಾಡಿ, ಮಾಡಿಕೊಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಚಿಕ್ಕರೂರಿಂದ ಬನವಾಸಿಗೆ ಮೋಟಾರಬಲ್ ರೋಡು ಇದೆ. ಅದು 32 ಮೈಲು ಇದೆ. ನೀವು ಹೇಳಿರುವ ಪ್ರಕಾರ ಇನ್ನೊಂದು ಮೋಟಾರಬಲ್ ರೋಡು ಮಾಡಿದರೆ, ಅದರ ಉದ್ದ ಸುಮಾರು 27 ಮೈಲಿಯಾಗುತ್ತದೆ. ಕೇವಲ 5 ಮೈಲಿ ವ್ಯತ್ಯಾಸಕ್ಕೋಸ್ಕರ ಮೂರು ಲಕ್ಷ ರೂಪಾಯಿ ಅದಕ್ಕೆ ಖರ್ಚು ಮಾಡಬೇಕಾಗಿರುವುದರಿಂದ ಇವರ ಅವಶ್ಯಕತೆ ಇಲ್ಲವೆಂದು ಸದ್ಯಕ್ಕೆ ಕೈಬಿಟ್ಟಿದ್ದೇವೆ. ಜೊತೆಗೆ ಆ ತಾಲೂಕಿನಲ್ಲಿ ಈಗಾಗಲೇ 50 ಮೈಲಿ ರೂರಲ್ ಕಮ್ಯುನಿಕೇಶನ್ ರೋಡು ಮಾಡಬೇಕೆಂದು ಇದ್ದರೂ ಅವರು 63 ಮೈಲಿ ಜಾಸ್ತಿ ಮಾಡಿದ್ದಾರೆ ಆ ಕಾರಣದಿಂದ ಸದ್ಯಕ್ಕೆ ಇದನ್ನು ಮಾಡುವುದು ಕಷ್ಟ. ಅನುಕೂಲವಾದಾಗ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಉತ್ತರದಿಂದ, ರೂರಲ್ ಕಮ್ಯುನಿಕೇಶನ್ ರೋಡ್ಸ್ 50 ಮೈಲಿಗಿಂತಲೂ ಜಾಸ್ತಿ ಮಾಡಿದ್ದಾರೆ ಎಂದು ಹೇಳಿದ್ದು ಆಶ್ಚರ್ಯವಾಗುತ್ತದೆ. ಸೊರಬ ತಾಲ್ಲೂಕು ನರಿಯಾದ ರೋಡು ಕಾಣದಿರತಕ್ಕಂತಹ ಸ್ಥಳ. ದಯವಿಟ್ಟು ಈ ಆಶ್ಚರ್ಯ ಉಂಟು ಮಾಡದೆ, ಪುನಃ ಪರಿಶೀಲನೆ ಮಾಡಿ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಆಶ್ಚರ್ಯವೇನೂ ಇಲ್ಲ. ನನಗೆ ಒದಗಿಸಿರುವ ಅಂಕಿ ಅಂಶಗಳ ಪ್ರಕಾರ ಈಗಾಗಲೇ 63 ಮೈಲುಗಳಷ್ಟು ಆರ್.ಸಿ. ರೋಡನ್ನು ಮಾಡಿಸಿದ್ದಾರೆ. ಬಹುಶಃ ಅದು ಪೂರ್ಣವಾಗಿ ಆಗದೇ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ಬೇರೆ ಒಂದು ರಸ್ತೆ ಇದೆ. ಆದು ಕೇವಲ 4-5 ಮೈಲಿಗಳ ಡಿಫರೆನ್ಸ್ ಇದೆಯೆಂದು ಹೇಳಿದ್ದೀರಿ. ಅದು ಯಾವ ರೂಟು ? ನನಗೆ ಗೊತ್ತಿರುವ ಹಾಗೆ ಈ ಮಾರ್ಗದಲ್ಲಿ ಬನವಾಸಿ ಹತ್ತಿರ ಯಾವುದೂ ಬೇರೆ ಮಾರ್ಗ ಇಲ್ಲ. ನಾನು ಕೇಳಿರುವ ಪ್ರಶ್ನೆಯಲ್ಲಿರುವ ಮಾರ್ಗವೇ ಬಹಳ ನಿಯರಸ್ಟ್ ರೂಟು ಅಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಚಿಕ್ಕರೂರು ಜಾಗದಿಂದ ಹುಣುಸುಹಳ್ಳಿಗೆ ನುಮಾರು ಹನ್ನೊಂದುವರೆ ಮೈಲಿಗಳು ಇರುತ್ತವೆ. ಅದು ಮೊದಲೇ ಪಿ.ಡಬ್ಲ್ಯೂ.ಡಿ. ರಸ್ತೆಯಾಗಿದೆ. ಅಲ್ಲಿಂದ ಮುಂದೆ ಅಣವತಿ ಮಾರ್ಗವಾಗಿ ಈ ರಸ್ತೆ ಬಂದು ಕೊನೆಗೆ ತವನಂದಿ–ಕೆರೆಕೊಪ್ಪ ಮಾರ್ಗವಾಗಿ ಹೋಗುತ್ತದೆ. ಇದರ ಒಟ್ಟು ಉದ್ದ 32 ಮೈಲಿಗಳು ಆಗುತ್ತವೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಮಾಡಿದರೆ ಅಲ್ಲಿ ಸ್ವಲ್ಪ ಕ್ರಾಸ್ ಮಾಡಬೇಕಾಗುತ್ತದೆ. ಒಂದು ವೇಳೆ ಅದನ್ನು ಬೇರೆ ಮಾಡುವಾಗ ಒಂದು ಸ್ಥಳದಲ್ಲಿ ದಂಡವತಿ ನದಿಗೆ ಸೇತುವೆ ಕಟ್ಟಬೇಕಾಗುತ್ತದೆ. ಇದಕ್ಕೆ 3 ಲಕ್ಷ ರೂಪಾಯಿಗಳ ಖರ್ಚು ಆಗುತ್ತದೆಂದು ಅಂದಾಜು ಮಾಡಿದ್ದಾರೆ. ಕೇವಲ 5 ಮೈಲಿಗಳನ್ನು ಬಳಸುವುದಕ್ಕೆ ಇಷ್ಟು ಖರ್ಚು ಮಾಡುವುದು ಸರಿಯಲ್ಲವೆಂದು ತೀರ್ಮಾನಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇಂತಹ ದೊಡ್ಡ ನದಿಗೆ ಸೇತುವೆ ಕಟ್ಟುವುದಕ್ಕೆ ಬರುವುದಿಲ್ಲ. ಅಧಿಕಾರಿಗಳು ತಪ್ಪು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅಲ್ಲಿರುವ ಒಂದು ಸಣ್ಣ ಹಳ್ಳವನ್ನು ಮುಚ್ಚಿ ಸೇತುವೆ ಕಟ್ಟುವುದಕ್ಕೆ ಕೇವಲ 40-50 ಸಾವಿರ ರೂಪಾಯಿಗಳು ಖರ್ಚಾಗಬಹುದು. ಆದ್ದರಿಂದ ಮತ್ತೆ ಬೇರೆ ವರದಿಯನ್ನು ಅಧಿಕಾರಿಗಳಿಂದ ತರಿಸಿ ಅದನ್ನು ಪುನಃ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಪರಿಶೀಲನೆ ಮಾಡುತ್ತೇನೆ.

Accommodation to Veterinary Dispensary

185. **Sri PRABHU RAO JAGDALE** (Hulsoor).—

Will the Minister of State for Veterinary and Animal Husbandry be pleased to state :—

(*a*) whether Government is aware that there is insufficient accommodation for the full fledged Veterinary Dispensary at Village Nittur, District Bidar ;

(*b*) whether Government is aware that there are no residential quarters for the Assistant Surgeon and his staff ;

(*c*) the steps taken to remedy the situation and to provide accommodation for Veterinary Dispensary and its staff ?

A.—**Sri G. B. SHANKAR RAO** (Minister of State for Veterinary and Animal Husbandry).—

(*a*) Yes.

(*b*) Yes.

(*c*) There is no provision for the construction of Dispensary Building or Quarters to the staff. The Private and Local Bodies are being requested to provide these facilities.

ಶ್ರೀ ಪ್ರಭುರಾವ್ ಜಗದಾಳೆ.—ಲೋಕಲ್ ಬಾಡಿಗಳು ಸದರೀ ಡಿಸ್‌ಪೆನ್ಸರಿಗೆ ಸಂಬಂಧಪಟ್ಟ ಸಿಬ್ಬಂದಿ ವರ್ಗದವರಿಗೆ ವಸತಿ ಸೌಲಭ್ಯಗಳನ್ನು ಕೊಡುವಂತೆ ಸರ್ಕಾರದವರು ಅವರಿಗೆ ಏನಾದರೂ ಸೂಚನೆಗಳನ್ನು ಕೊಟ್ಟಿದ್ದಾರೆಯೇ ?